ಎಂದು ಹೇಳುತ್ತಿಲ್ಲ ಅಥವಾ ಹೀಗೆ ಹೇಳುವವರಲ್ಲಿ ನಾನೇ ಮೊದಲಿಗನೂ ಅಲ್ಲ. ಹನ್ನೆರಡನೇ ಶತಮಾನದಲ್ಲಿ ಶರಣರು ಈಗ ನಾನು ಏನು ಹೇಳುತ್ತಿದ್ದೇನೋ ಅದಕ್ಕಿಂತ ಹೆಚ್ಚು ವಸ್ತುನಿಷ್ಠವಾಗಿ ನಾನು ಹೇಳುವುದನ್ನು ಜನರ ನಡುವಿಗೆ ಬಂದು ಹೇಳಿದ್ದಾರೆ ಮತ್ತು ಜನರ ಅರಿವನ್ನು ಹೆಚ್ಚಿಸಿದ್ದಾರೆ. ಉದಾಹರಣೆಗೆ, ನಾನು ನಾಗಮಂಡಲದಲ್ಲಿ ನಾಗನನ್ನು ಹೆಚ್ಚು ವೈಭವೀಕರಿಸಬೇಕಿತ್ತು ಎಂಬಂತೆ ನೀವು ಮಾತನಾಡಿದಿರಿ. ವಸ್ತುಸ್ಥಿತಿ ಹಾಗಿಲ್ಲ. ಬಸವಣ್ಣ 'ಕಲ್ಲನಾಗರ ಕಂಡರೆ ಹಾಲನೆರೆ ಎಂಬರು, ದಿಟದ ನಾಗನ ಕಂಡರೆ ಕೊಲ್ಲೆಂಬರಯ್ಯ ಎಂದು ಹೇಳಿದ್ದು ನಿಮಗೂ ಗೊತ್ತಿರಬಹುದಲ್ಲ?' ಎಂದರು.

ರಾಯರ ಮಾತುಗಳು ಪುಟ್ಟ ಭಾಷಣದ ರೂಪದಲ್ಲಿದ್ದುವು. ಅವರಿಗೆ ತನ್ನನ್ನು ಬೆದರಿಸಲು ಬಂದವರು ಅಪಾಯಕಾರಿಗಳಲ್ಲ ಎನ್ನುವುದು ಆಗಲೇ ಮನದಟ್ಟಾಗಿತ್ತು. ಇದರಿಂದಾಗಿ ಅವರು ಧೈರ್ಯದಲ್ಲಿ ತಾನು ಹೇಳಬೇಕಾದುದನ್ನು ಹೇಳಿ ಮುಗಿಸಿದರು.

ಆ ನಾಲ್ವರು ಯುವಕರು ರಾಯರ ಮಾತುಗಳಿಂದ ತುಸು ಪ್ರಭಾವಿತರಾದಂತೆ ಕಂಡು ಬಂತು. ಅವರು ಪರಸ್ಪರ ಮುಖ ನೋಡಿಕೊಳ್ಳತೊಡಗಿದರು. ಅದನ್ನು ಗಮನಿಸಿದ ರಾಯರಿಗೆ – ಈ ಹುಡುಗರು ಮುಗ್ಧರು; ತನ್ನ ವಿಚಾರವು ಇವರಿಗೆ ಅರ್ಥವಾದರೂ ಅದನ್ನು ಒಪ್ಪಿಕೊಳ್ಳಲು ಇವರು ಸಿದ್ಧರಿರಲಿಲ್ಲ. ಅಥವಾ ಅವರನ್ನು ಈ ಕೆಲಸಕ್ಕೆ ಹಚ್ಚಿದವರಿಗೆ ತನ್ನನ್ನು ಸೀತಾಪುರದಿಂದ ಹೊರಗಟ್ಟುವುದೇ ಉದ್ದೇಶವಾಗಿತ್ತು ಎನ್ನುವುದು ಹೊಳೆಯಿತು. ಅದನ್ನೇ ಅವರು ಆ ಯುವಕರಿಗೆ ಹೇಳಬೇಕೆನ್ನುವಷ್ಟರಲ್ಲಿ ಸರೋಜಮ್ಮ 'ನಿಮಗೆ ದಮ್ಮಯ್ಯ, ನಮ್ಮ ಯಜಮಾನರಿಗೆ ಏನೂ ಮಾಡಬೇಡಿ. ಈ ಊರಿನವರಿಗೆ ನಾವು ಈ ಊರಲ್ಲಿರುವುದು ಇಷ್ಟವಿಲ್ಲವಾದರೆ ಖಂಡಿತ ನಾವು ಈ ಊರಿನಿಂದ ಹೊರಟುಹೋಗುತ್ತೇವೆ' ಎನ್ನುತ್ತಾ ಆ ಹುಡುಗರಿಗೆ ಕೈ ಮುಗಿದರು.

ರಾಯರಿಗೆ ತನ್ನ ಪತ್ನಿಯ ಮಾತು ಇಷ್ಟವಾಗಲಿಲ್ಲ. ಅವರು ಸರೋಜಮ್ಮನಾಚೆ ಹೊರಳಿ, 'ಏನು ಹೇಳ್ತಿದ್ದೀಯೇ ನೀನು? ಇಲ್ಲಿಂದ ನಾವು ಮರಳಿ ಹೋಗುವುದಾದರೂ ಯಾಕೆ? ಅಥವಾ ಎಲ್ಲಿಗೆ? ಎಂದು ಸ್ವಲ್ಪವಾದರೂ ಯೋಚಿಸಬೇಡವೇ?' ಎಂದು ಆಕೆಯನ್ನು ತರಾಟೆಗೆ ತೆಗೆದುಕೊಳ್ಳುತ್ತ, ಆ ಮಾತನ್ನು ಗಮನಿಸುತ್ತಿದ್ದ ಹುಡುಗರ ಕಡೆ ತಿರುಗಿ 'ನಿಮಗೆ ಈ ಊರಲ್ಲಿ ಇರುವ ಹಕ್ಕು ಎಷ್ಟಿದೆಯೋ ಅಷ್ಟೇ ನನಗೂ ಇದೆ. ನಾನು ನಿಮ್ಮ ಬೆದರಿಕೆಗೆ ಹೆದರುವವನಲ್ಲ' ಎಂದರು.

ಆ ಹುಡುಗರ ಮುಖ ಕೆಂಪಾಯಿತು. ಸಣಕಲು ದೇಹದ ವ್ಯಕ್ತಿ. 'ನೀವು ನಮಗೆ ಹೆದರಿಸುವುದಾದರೆ ಹೆದರಿಸಿ ನೋಡಿ. ಆದರೆ ಒಂದು ಮಾತು ತಿಳಿದುಕೊಳ್ಳಿ. ನಿಮ್ಮ ಭಾಷಣವನ್ನು ಮೆಚ್ಚುವಂಥವರು, ನಿಮ್ಮನ್ನು ಕೊಂಡಾಡುವವರು, ನೀವು ಅಪಾಯದಲ್ಲಿ ಬಿದ್ದರೆ ಖಂಡಿತ ನಿಮ್ಮ ಜೊತೆ ಬರುವುದಿಲ್ಲ' ಎಂದ.

ರಾಯರ ಸಿಟ್ಟು ನೆತ್ತಿಗೇರಿತು. ಅವರು ಸಣ್ಣಗೆ ಕಂಪಿಸುತ್ತಾ, 'ನನ್ನ ಪರವಾಗಿರುವವರು ಬರುತ್ತಾರೋ ಇಲ್ಲವೋ ಎನ್ನುವುದು ನಿಮಗಲ್ಲ, ನನಗೆ ಗೊತ್ತು. ಆ ಬಗ್ಗೆ ನೀವು ಚಿಂತಿಸುವುದು ಬೇಡ' ಎಂದು ಮೇಲೆದ್ದರು. 'ನೀವು ನೀವಾಗಿಯೇ ಬಂದವರೋ ಅಥವಾ ನಿಮ್ಮನ್ನು ಯಾರಾದರೂ ನನ್ನ ಮೇಲೆ ಛೂ ಬಿಟ್ಟಿದ್ದಾರೋ ಹೇಳಿ' ಎಂದರು.

ಆ ಮಾತು ಹುಡುಗರನ್ನು ಕೆರಳಿಸಿತು. ಅವರೆಲ್ಲ ಒಟ್ಟಾಗಿ 'ಅದೆಲ್ಲ ನಿಮಗೆ ಯಾಕೆ? ನಾವೇ ಬಂದವರು ಎಂದು ಇಟ್ಟುಕೊಳ್ಳಿ ಅಥವಾ ಬೇರೆಯವರು ಛೂ ಬಿಟ್ಟಿದ್ದಾರೆ ಎಂದೂ ಹೇಳಿಕೊಳ್ಳಿ. ಎರಡರ ಫಲಿತಾಂಶ ಒಂದೇ' ಎಂದರು.

ರಾಯರಿಗೆ ಇವರನ್ನು ಹೇಗೆ ಹೊರದಬ್ಬುವುದು ಎಂದು ಹೊಳೆಯಲಿಲ್ಲ. ತಾನು ಜೋರಾಗಿ ಮಾತನಾಡಿದರೆ. ಇವರು ತನಗೆ ಅಪಾಯವನ್ನೂ ಮಾಡಬಹುದು ಎಂದು ತರ್ಕಿಸಿದ ಅವರು ತಗ್ಗಿದ ಸ್ವರದಲ್ಲಿ, 'ನೀವು ಹೇಳುವುದನ್ನೆಲ್ಲ ಹೇಳಿಯಾಗಿದೆ. ನಾನು ಹೇಳಬೇಕಾದ್ದನ್ನು ಹೇಳಿಯಾಗಿದೆ. ಮುಂದೆ ಏನಾಗುತ್ತದೋ ನೋಡೋಣ' ಎಂದರು.

ಸರೋಜಮ್ಮ 'ಅಣ್ಣಾ' ಎಂದು ಮತ್ತೆ ಆ ಹುಡುಗರನ್ನು ಸಂಬೋಧಿಸಿದರು. 'ನಾನು ನಿಮ್ಮ ಅಕ್ಕ ಅಂತ ತಿಳಿದುಕೊಳ್ಳಿ. ಇವರು ಏನೇ ಹೇಳಲಿ, ನಾನು ಈ ಊರನ್ನು ಬಿಟ್ಟು ಹೋಗುವ ಬಗ್ಗೆ ಖಂಡಿತ ಯೋಚಿಸುತ್ತೇನೆ' ಎಂದು ಕೈಮುಗಿದರು. ಆ ನಾಲ್ವರೂ ಎದ್ದು ನಿಂತರು. 'ಆವು ಅಕ್ಕ, ಈರೆನ ಪಾತೆರಗು ಗೌರವ ಕೊರ್ದು ಎಂಕ್ಲು ಪೋಪ' (ಆಯಿತಕ್ಕ, ನಿಮ್ಮ ಮಾತಿಗೆ ಗೌರವ ಕೊಟ್ಟು ನಾವು ಹೋಗುತ್ತೇವೆ') ಎನ್ನುತ್ತಾ ಹೊರನಡೆದರು.

ಸರೋಜಮ್ಮ ಬಾಗಿಲಲ್ಲಿ ಒರಗಿ ನಿಂತು ಆಗುಂತಕರು ಗೇಟು ದಾಟಿ ಹೋಗುವುದನ್ನು ನೋಡಿ ಒಳಬಂದರು. 'ನಿಮಗೆ ಇಷ್ಟು ಸಿಟ್ಟುಂಟು ಎಂದು ನನಗೆ ಗೊತ್ತೇ ಇರಲಿಲ್ಲ' ಎಂದು ರಾಯರಿಗೆ ಹೇಳುತ್ತಾ 'ನಿಮ್ಮ ಮಾತು ಕೇಳಿ ಆ ಹುಡುಗರು ಎಲ್ಲಿ ನಿಮ್ಮ ಮೇಲೆ ಎರಗುತ್ತಾರೋ ಎಂದು ನಾನು ಹೆದರಿದ್ದೆ' ಎಂದು ಅಳುಮೋರೆ ಹಾಕಿದರು.

ರಾಯರು ಸಣ್ಣಗೆ ನಕ್ಕರು. 'ಇಲ್ಲ ಸರೋಜ, ಅವರು ಸ್ವಇಚ್ಛೆಯಿಂದ ಬಂದವರಲ್ಲ! ಖಂಡಿತ ಯಾರೋ ನೀಡಿದ ಆಮಿಷಕ್ಕೆ ಒಳಗಾಗಿ, ನನ್ನನ್ನು ಹೆದರಿಸೋಣ ಎಂದು ಬಂದವರಿರಬೇಕು. ಆದರೆ ಅವರಿಗೆ ನಾನು ಹೆದರುವವನಲ್ಲ ಎಂದು ಗೊತ್ತಾಯಿತು' ಎಂದರು.

ಸರೋಜಮ್ಮ 'ನೀವು ಏನೇ ಹೇಳಿ. ಅವರು ಮನ್ನಣೆ ಕೊಟ್ಟದ್ದು ನನ್ನ ಮಾತಿಗೆ. ನಿಮ್ಮ ಭಾಷಣಕ್ಕಲ್ಲ' ಎನ್ನುತ್ತಾ 'ನನಗೆ ಇನ್ನು ಈ ಊರಲ್ಲಿ ಇರುವುದು ಸೇಫ್ ಅಲ್ಲ ಅಂತ ಅನಿಸಿದೆ. ನಾವು ಎಲ್ಲಾದರೂ ಹೋಗೋಣ' ಎಂದವರೇ, 'ನೀವು ಬೇಡ ಎಂದರೂ ನಾನು ಕೇಳುವವಳಲ್ಲ. ನಾಳೆ ನಿಮ್ಮ ಸ್ನೇಹಿತ ಸದಾಶಿವ ಶೆಟ್ಟರು ಬರುತ್ತಾರಲ್ಲ. ಆಗ ಅವರಲ್ಲಿ ಎಲ್ಲವನ್ನೂ ಹೇಳುತ್ತೇನೆ' ಎಂದರು. ರಾಯರಿಗೆ ಈ ಸರೋಜ ಹಟ ಹಿಡಿದರೆ ಸುಮ್ಮನೆ ಬಿಡುವವಳಲ್ಲ ಎಂದು ಗೊತ್ತಿತ್ತು. 'ಅಯ್ಯೋ ಇದೆಂಥ ಗ್ರಹಚಾರ ಬಡಿಯಿತಪ್ಪ ತನಗೆ' ಎಂದುಕೊಂಡರು.

ಸರೋಜಮ್ಮ ನಿಧಾನವಾಗಿ ಮೇಲೆದ್ದರು. ರಾತ್ರೆಯ ಊಟಕ್ಕೆ ಸಿದ್ಧತೆ ನಡೆಸಲು ಮುಂದಾದರು. ರಾಯರಿಗೆ ಬೆಳಿಗ್ಗೆ ಬಂದ ಜಯಂತಿ ಕುಲಕರ್ಣಿ ಅವರ ಪತ್ರದ ಜೊತೆ ಈಗ ನಡೆದ ಘಟನೆಯೂ ಸೇರಿ ಎಲ್ಲವೂ ಒಂದು ಸವಾಲಾದಂತೆ ಕಾಣತೊಡಗಿತು. ಆದರೆ ಜಯಂತಿ ಕುಲಕರ್ಣಿ ಅವರಿಗೆ ತಾನು ನೆರವಾಗಬೇಕಾದದ್ದು ಧರ್ಮ, ಹಾಗೆಯೇ ಇಲ್ಲಿ ತನ್ನ ಧರ್ಮಪತ್ನಿಯನ್ನು ಆತಂಕದಿಂದ ಮುಕ್ತಗೊಳಿಸಬೇಕಾದ್ದೂ ಅನಿವಾರ್ಯ ಎಂದುಕೊಂಡ ಅವರು, ಈಗೇನು ಮಾಡುವುದು ಎಂದು ಯೋಚಿಸುತ್ತಾ ಕುಳಿತರು.

ಸರೋಜಮ್ಮ 'ಬನ್ನಿ, ಚಪಾತಿ ಸಿದ್ಧವಾಗಿದೆ' ಎಂದು ರಾತ್ರೆಯ ಊಟಕ್ಕೆ ರಾಯರನ್ನು ಕರೆದಾಗ, ರಾಯರು ಹೋಗಿ ಬಟ್ಟಲ ಮುಂದೆ ಕುಳಿತರು. ಏನೂ ಆಡದೆ ಚಪಾತಿ ತಿಂದು ಎದ್ದರು. ಸರೋಜಮ್ಮನಿಗೆ ತನ್ನ ಗಂಡ ತುಂಬಾ ಆತಂಕದಿಂದ ಮೌನವಾಗಿದ್ದಾರೆ ಅನಿಸಿತು. 'ಯಾಕೆ ಏನೂ ಆಡುತ್ತಿಲ್ಲ ನೀವು?' ಎಂದು ಕೇಳಿದರು. 'ಏನಿಲ್ಲ, ಸುಮ್ಮನೇ ಆಗಿನ ಘಟನೆಯ ಬಗ್ಗೆ ಯೋಚಿಸುತ್ತಿದ್ದೆ' ಎಂದರು.

ರಾತ್ರೆ ನಿತ್ಯ ಮಲಗುವ ಸಮಯಕ್ಕೇ ಇಬ್ಬರೂ ಮಲಗಿಕೊಂಡರು. ಸರೋಜಮ್ಮ ಗಂಡನಲ್ಲಿ 'ನನಗೆ ಏಕೋ ರಾತ್ರೆ ಮತ್ತೆ ಆ ಹುಡುಗರು ಬರಬಹುದೇ ಎಂಬ ಸಂಶಯ ಇದೆ' ಎಂದು ಪಿಸುಗುಟ್ಟಿದರು. ರಾಯರು 'ಹೌದು, ಬರಬಹುದು' ಎಂದು ನಗುತ್ತಾ 'ಸುಮ್ಮನೇ ಮಲಗು. ಖಂಡಿತ ಅವರು ಬರುವುದಿಲ್ಲ. ಬಂದರೆ ಅವರನ್ನು ಹೇಗೆ ಇದಿರಿಸಬೇಕು ಎನ್ನುವುದನ್ನು ನಾನು ಆಗಲೇ ನಿರ್ಧರಿಸಿದ್ದೇನೆ' ಎಂದರು.

ಸರೋಜಮ್ಮ 'ಹೇಗೆ?' ಎಂದು ಕುತೂಹಲದಲ್ಲಿ ಕೇಳಿದರು. ರಾಯರು 'ಅಯ್ಯೋ ಪೆದ್ದಿ, ಈಗ ನಾನು ಹೀಗೆ ಅಂತ ಹೇಗೆ ಹೇಳಲಿ? ಅವರು ಬರಲಿ, ಆಗ ನೋಡು,' ಎಂದು ಹೆಂಡತಿಯನ್ನು ಸಂತೈಸಿ, 'ನಾಳೆ ಬೆಳಿಗ್ಗೆ ಅವರಿಗೆ ಹೇಗೆ ಬುದ್ಧಿ ಕಲಿಸುತ್ತೇನೆ ಗೊತ್ತಾ?' ಎಂದರು.

ಸರೋಜಮ್ಮ ಮೌನವಾದರು. ಸ್ವಲ್ಪ ಹೊತ್ತಿನಲ್ಲಿ ಅವರಿಗೆ ನಿದ್ದೆ ಬಂತು. ಆದರೆ ರಾಯರಿಗೆ ನಿದ್ದೆ ಬರಲಿಲ್ಲ. ಅವರಿಗೆ ಮತ್ತೆ ಅಡಿಗರ 'ಭೂತ' ಕವನವು ಇದಿರು ಬಂದಂತಾಯಿತು. ತಕ್ಷಣ ಜಯಂತಿ ಕುಲಕರ್ಣಿ ಅವರ ಪತ್ರ ಅವಳ ಜೊತೆಗೆ ಹಿಂದೆ ಇದ್ದ ಅವರ ಒಡನಾಟಗಳೆಲ್ಲ ಕಾಣಿಸಿಕೊಳ್ಳತೊಡಗಿತು.

ಜಯಂತಿ ಕುಲಕರ್ಣಿಯ ಪರಿಚಯ ಈಚೆಗಿನ ಸುಮಾರು ಇಪ್ಪತ್ತೈದು ವರುಷಗಳಿಂದ ರಾಯರಿಗಿದೆ. ಅವಳ ಗಂಡ ಸತೀಶ ಕುಲಕರ್ಣಿ ಅವರು ಇಂಗ್ಲಿಷ್ ವಿಭಾಗದಲ್ಲಿ ರಾಯರ ಕೈಕೆಳಗಿನ ಅಧ್ಯಾಪಕರಾಗಿದ್ದಾಗಿನಿಂದ ಅದು ಪ್ರಾರಂಭವಾಗಿತ್ತು. ಕುಲಕರ್ಣಿ ಅವರು ತನ್ನ ಮದುವೆಗೆ ಹುಡುಗಿ ನೋಡುವ ಶಾಸ್ತ್ರಕ್ಕೆ ರಾಯರನ್ನು ಕರೆಯುತ್ತಾ ಹೇಳಿದ ಮಾತನ್ನು ರಾಯರು ಈ ತನಕವೂ ಮರೆಯಲಿಲ್ಲ.

ಸಶೇಷ